ಮಾರ್ಕೆಟ್‌ನಲ್ಲಿ ಮಾರಾಟ ಆಗದೇ ಇರುವಂಥಾದ್ದನ್ನು ಹಾಸ್ಟೆಲ್‌ಗಳಿಗೆ ಕೊಡುವುದು ಒಂದು ಭಾಗವಾದರೆ, ಇನ್ನೊಂದು ಭಾಗವೆಂದರೆ ಅವರು ಕ್ವಾಂಟಿಟಿಯನ್ನೇ ಕಡಿಮೆ ಕೊಡುತ್ತಾರೆ. ಒಂದು ಕ್ವಿಂಟಾಲ್‌ಗೆ ಆರ್ಡರ್ ಕೊಟ್ಟರೆ ಅವರು 50 ಕೆ.ಜಿ.ಯನ್ನು ಮಾತ್ರ ಕೊಡುತ್ತಾರೆ.ಇನ್ನುಳಿದ 50 ಕೆ.ಜಿ.ಯನ್ನು ಸೊಸೈಟಿಯವರು ಮತ್ತು ಸಂಬಂಧಪಟ್ಟ ಅಧಿಕಾರಿಗಳು ಹಂಚಿಕೊಳ್ಳುವಂತಹ ಕೆಲಸವನ್ನು ಮಾಡುತ್ತಾರೆ. ಅದಕ್ಕಾಗಿ ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ, ಇದಕ್ಕೆ ಏನಾದರೊಂದು ಬಿಗಿ ಕ್ರಮ ತೆಗೆದುಕೊಳ್ಳಬೇಕು. ಆಹಾರಧಾನ್ಯ ಪೂರ್ಣವಾಗಿ ಪೂರೈಸುವ ಹಾಗೆ ಆಗಬೇಕು. ಉತ್ತಮ ಗುಣಮಟ್ಟದ ಆಹಾರಧಾನ್ಯ ಪೂರೈಸುವ ಹಾಗೆ ಆಗಬೇಕು. ರಾತ್ರಿಯ ಹೊತ್ತು, ಉಳಿದಿದ್ದಂಥ ಕಾಯಿಪಲ್ಯಗಳನ್ನು ಖರೀದಿ ಮಾಡುವುದನ್ನು ನಿಲ್ಲಿಸಬೇಕು. ಅದಕ್ಕೆ ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಸಂಬಂಧಪಟ್ಟ ಅಧಿಕಾರಿಗಳು ಇನ್ಸ್‌ಪೆಕ್ಷನ್ ಮಾಡಿ ಬಿಗಿ ಮಾಡಬೇಕಾಗುತ್ತದೆ. ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು ಇನ್ಸ್‌ಪೆಕ್ಷನ್ ಮಾಡಿದರೆ ಮಾತ್ರ ಸಾಧ್ಯವಾಗುತ್ತದೆ. ಸರ್ಕಾರ ಆ ರೀತಿ ಒಂದು ಆದೇಶ ಹೊರಡಿಸಬೇಕು ಎಂದು ವಿನಂತಿ ಮಾಡುತ್ತೇನೆ.

ಡಾ.ವೈ.ನಾಗಪ್ಪ : ಸದ್ಯ , ಈಗ ನಮ್ಮ ರಾಜ್ಯದಲ್ಲಿ, 5 ಜಿಲ್ಲೆಗಳಲ್ಲಿರುವ 30 ಹಾಸ್ಟೆಲ್‌ಗಳಲ್ಲಿ ಈ ಒಂದು ಕಂಪ್ಲೇಂಟ್ ಬಂದಿದೆ. ಆ ಜಿಲ್ಲೆಗಳಿಗೆ ನಮ್ಮ ಅಧಿಕಾರಿ ಗಳು ಭೇಟಿ ಕೊಟ್ಟಿದ್ದು, ಸುಮಾರು 30 ಜನ ಮೇಲ್ವಿಚಾರಕರ ಮೇಲೆ ನಾವು ಕ್ರಮವನ್ನು ಜರುಗಿಸಿದ್ದೇವೆ ಪುನಃ ಹಾಗೇನಾದರೂ ಆಗಿದ್ದರೆ, ಸದಸ್ಯರುಗಳು ಬರವಣಿಗೆ ಮೂಲಕ ತಿಳಿಸಿದರೆ, ಅದನ್ನು ಸರಿಪಡಿಸಲು ನಾವು ನಮ್ಮ ಅಧಿಕಾರಿಗಳಿಗೆ ಆದೇಶ ಕೊಟ್ಟು, ಸರಿಪಡಿಸುತ್ತೇವೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 3654

ಸದಸ್ಯರ ಹೆಸರು : ಶ್ರೀ ನರೇಂದ್ರಬಾಬು ನೆ.ಲ.

ಉತ್ತರಿಸುವ ಸಚಿವರು : ಭಾರಿ ಮಧ್ಯಮ, ಸಣ್ಣ ಕೈಗಾರಿಕೆ ಹಾಗೂ ಮೂಲ ಭೂತ ಸೌಲಭ್ಯಗಳ ಸಚಿವರು.

ಪ್ರಶ್ನೆ	ಉತ್ತರ
ಅ) ಯಶವಂತಪುರದ ಬಳಿಯಿರುವ ಕಿರ್ಲೋಸ್ಕರ್ ಕಂಪೆನಿಯ ಜಮೀನಿನ ಒಟ್ಟು ವಿಸ್ತೀರ್ಣವೆಷ್ಟು;	52 ಎಕರೆ 21 ಗುಂಟೆಗಳು

ಪ್ರಶ್ನೆ	ಉತ್ತರ
ಆ) ಇದರ ಪೈಕಿ ಇತ್ತೀಚೆಗೆ ಕಂಪನಿ ಖಾಸಗಿಯವರಿಗೆ ಪರಭಾರೆ ಮಾಡಿರುವ ಜಾಗ ಎಷ್ಟು;	51 ಎಕರೆ 21 ಗುಂಟೆಗಳು
ಇ) ಈ ಪರಭಾರೆ ಜಮೀನಿನಲ್ಲಿ ಬಹುಮಹಡಿಗಳ ಕಟ್ಟಡ ತಲೆ ಎತ್ತುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಸರ್ಕಾರದ ಗಮನಕ್ಕೆ ಬಂದಿರುತ್ತದೆ.
ಈ) ಹಾಗಿದ್ದಲ್ಲಿ, ಸಂಬಂಧಪಟ್ಟ ಇಲಾಖೆಯಿಂದ ಪರವಾನಗಿ ಪಡೆಯಲಾಗಿದೆಯೇ;	ಹೌದು
ಉ) ಈ ಬಹುಮಹಡಿ ಕಟ್ಟಡ ನಿರ್ಮಿಸುವ ಮೊದಲು ಕೇಂದ್ರ ಮತ್ತು ರಾಜ್ಯ ಸರ್ಕಾರದ ಪರಿಸರ ಹಾಗೂ ಕೇಂದ್ರ ರೈಲ್ವೆ ಇಲಾಖೆಯಿಂದ ಪರವಾನಗಿ ಅಥವಾ ಅನುಮತಿಯನ್ನು ಪಡೆಯಲಾಗಿದೆಯೇ;	ಇಲ್ಲ ಆದರೆ ಆ ಇಲಾಖೆಗಳಿಂದ ಅಂತಹ ಪರವಾನಗಿ ಪಡೆಯುವ ಅವಶ್ಯಕತೆ ಇರುವುದಿಲ್ಲ.

ಶ್ರೀ ನೆ.ಲ.ನರೇಂದ್ರ ಬಾಬು : ಯಶವಂತಪುರದ ಬಳಿಯಿರುವ ಕಿರ್ಲೋಸ್ಕರ್ ಕಂಪನಿಯ ಜಮೀನಿನ ಒಟ್ಟು ವಿಸ್ತೀರ್ಣವೆಷ್ಟು ಎಂದು ನಾನು ಪ್ರಶ್ನೆ ಕೇಳಿದಂಥಾದ್ದಕ್ಕೆ 52 ಎಕರೆ 21 ಗುಂಟೆ ಎಂದು ಹೇಳಿದ್ದಾರೆ. ನನಗೆ ಗೊತ್ತಿರುವ ಹಾಗೆ, ನಾನು ಆರ್ಚೀವ್ಸನಲ್ಲಿ ಓದಿದ ಪ್ರಕಾರ, ಆ ಜಮೀನನ್ನು ಅಂದು ಸರ್ಕಾರ ಕಿರ್ಲೋಸ್ಕರ್‌ರವರಿಗೆ ಕಾರ್ಖಾನೆಯನ್ನು ಅಭಿವೃದ್ಧಿ ಮಾಡಲು ಕೊಟ್ಟಂಥದ್ದು. ಅಲ್ಲಿದ್ದಂಥ ಸಾಮಾನ್ಯ ಬಡ ರೈತರನ್ನು, ಇಲ್ಲಿ ಕಾರ್ಖಾನೆ ಮಾಡುತ್ತೇವೆ, ಕಾರ್ಖಾನೆಯಿಂದ ಬಹಳಷ್ಟು ನಿರುದ್ಯೋಗಿಗಳಿಗೆ ಯುವಕರಿಗೆ ಕೆಲಸ ಸಿಗುತ್ತದೆ ಎಂದು ಹೇಳಿ, ಆ ಜಮೀನನ್ನು ಬಡವರಿಂದ ಅವರಿಗೆ ಕಡಿಮೆ ಕಾಂಪನ್‌ಸೇಷನ್

ಕೊಟ್ಟು ತೆಗೆದುಕೊಂಡಂಥಾದ್ದು, ಅದನ್ನು ಕಾರ್ಖಾನೆಯವರಿಗೆ ಉಚಿತವಾಗಿ ಕೊಟ್ಟಿದ್ದಾರೆ. ಆದರೆ ಇವತ್ತು, ಕಾರ್ಖಾನೆಗಾಗಿ ಇದ್ದಂಥ ಆ ಜಮೀನನ್ನು ರಿಯಲ್ ಎಸ್ಟೇಟ್‌ಗೋಸ್ಕರ ಮಾರಿದ್ದಾರೆ. ಬೆಂಗಳೂರು ನಗರ Show - case of Industries ಎಂದು ಎಲ್ಲ ಕಡೆ ನಾವು ಪೇಪರ್‌ಗಳಲ್ಲಿ ಓದುತ್ತೇವೆ. ಸರ್.ಎಂ.ವಿಶ್ವೇಶ್ವರಯ್ಯನವರು ಹುಟ್ಟಿರತಕ್ಕಂಥ ಈ ನಾಡಿನಲ್ಲಿ ಕಾರ್ಖಾನೆಗಳು ಉಳಿಯಬೇಕೇ ಅಥವಾ ಇದೇ ರೀತಿಯಲ್ಲಿ ರಿಯಲ್ ಎಸ್ಟೇಟ್ ದಂಧೆಗೆ ಕಾರ್ಖಾನೆ ಜಮೀನುಗಳನ್ನು ಕೊಟ್ಟು ಕೊಂಡು ಹೋಗಬೇಕೇ ಎನ್ನುವ ಆತಂಕ ನನಗೆ ಈ ಬೆಂಗಳೂರು ನಗರದ ಒಬ್ಬ ಸದಸ್ಯನಾಗಿ ಉಂಟಾಗುತ್ತಿದೆ. ಇವತ್ತು ಬೆಂಗಳೂರು ನಗರದಲ್ಲಿ ಕಿರ್ಲೋಸ್ಕರ್ ಫ್ಯಾಕ್ಟರಿಯ ಬಳಿ ಮೆಟ್ರೋ ಬಂದಿದೆ, ಹಿಂದೆ ಅಲ್ಲೆ ನಾವು ಅಟವಾಡಿದಂಥವರು, ಆಗ ಅಲ್ಲಿ ಪ್ಲೇಗ್ರೌಂಡ್ ಇತ್ತು. ಆದರೆ ಇವತ್ತು ಆ ಕಾರ್ಖಾನೆಯವರು ಆ ಜಾಗವನ್ನು ಮೆಟ್ರೋಗೆ ಲೀಸ್‌ಗೆ ಕೊಟ್ಟಿದ್ದಾರೆ ಅಥವಾ ಸೇಲ್ ಮಾಡಿದ್ದಾರೆ. ಅದೇ ರೀತಿ, ಬಿನ್ನಿಮಿಲ್‌ನಲ್ಲೂ ಮಾರಬೇಕಾದರೆ ಅಥವಾ change of land use ಮಾಡಬೇಕಾದರೆ ಯಾವ ನಿಯಮಗಳನ್ನು ಅನುಸರಿಬೇಕೆಂಬುದನ್ನು ಬಿ.ಡಿ.ಎ.ನ ಸಂಬಂಧಪಟ್ಟ ಹಾಗೆ ಕೇಳುತ್ತೇನೆ, ಕಂಟ್ರಿ ಟೌನ್ ಪ್ಲಾನ್ ಆಕ್ಟ್ ಪ್ರಕಾರ, ಇವತ್ತು ಯಾರೇ ಒಬ್ಬರು ಜಮೀನಿನಲ್ಲಿ ಸೈಟುಗಳನ್ನು ವಿಂಗಡಿಸಬೇಕಾದರೆ ಶೇಕಡಾ 60ರಷ್ಟನ್ನು ಸಿವಿಕ್ ಅಮಿನಿಟೀಸ್‌ಗೆ ಅಂದರೆ, ಪಾರ್ಕುಗಳಿಗೆ, ಪ್ಲೇ ಗ್ರೌಂಡುಗಳಿಗೆ, ರಸ್ತೆಗಳಿಗೆ ಬಿಡಬೇಕು ಎಂದು ಇದೆ. ಈ ಪ್ರಶ್ನೆಗೆ ಸಂಬಂಧಪಟ್ಟಂತಿರುವ 52 ಎಕರೆಯಲ್ಲಿ ಸುಮಾರು 32 ಎಕರೆಯಷ್ಟು ಜಮೀನನ್ನು ಸಿವಿಕ್ ಅಮಿನಿಟೀಸ್‌ಗಳಿಗೆ ಬಿಡಬೇಕು, ಅದು ಆಟದ ಮೈದಾನ ವಿರಬಹುದು, ಪಾರ್ಕ್ ಇರಬಹುದು, ಅಥವಾ ರಸ್ತೆ ಇರಬಹುದು, ಇಂಥಾದ್ದಕ್ಕೆ ಬಿಡಬೇಕು. ಆದರೆ ಇವತ್ತು ಒಂದು ಎಕರೆಯನ್ನೂ ಇದಕ್ಕೆ ಸಂಬಂಧಪಟ್ಟಂತೆ ಬಿಡುತ್ತಿಲ್ಲ. ಜೊತೆಗೆ ಅಲ್ಲಿಗೆ ಹೋಗಿ ನೋಡಿದಾಗ, ಈಗ ಬಂದಿರತಕ್ಕಂಥ ಅಪಾರ್ಟ್‌ಮೆಂಟಿನ ಸುತ್ತಮುತ್ತ, ಯಾವುದಾದರೂ ಫೈರ್ ಆಕ್ಸಿಡೆಂಟ್ಸ್ ಆದರೆ ಫೈರ್ ಇಂಜಿನ್‌ಗಳು ಓಡಾಡಲು ಆಗುತ್ತಿಲ್ಲ. ಸಂಬಂಧಪಟ್ಟ ಇಲಾಖೆಯಿಂದ ಪರ್ಮಿಷನ್ನನ್ನು ಲೈಸೆನ್ಸನ್ನು ಬಿಲ್ಡಿಂಗ್ ಕಟ್ಟಲು ತೆಗೆದುಕೊಂಡಿದ್ದಾರೆ ಎಂದು ಉತ್ತರವನ್ನು ಕೊಟ್ಟಿದ್ದಾರೆ. ಇದನ್ನು ಯಾರು ಕೊಟ್ಟರು? ಬಿಲ್ಡಿಂಗ್ ಆಕ್ಯುಪೇಷನ್ ಮಾಡುವುದಕ್ಕೆ ಮೊದಲು ಆಕ್ಯುಪೇಷನ್ ಸರ್ಟಿಫಿಕೇಟ್ ಕೊಡುವುದಕ್ಕೆ ಮೊದಲು ಅದನ್ನು ಇನ್ಸ್‌ಪೆಕ್ಷನ್ ಮಾಡಿದರೇ ಇಲ್ಲವೇ ಎನ್ನುವುದು ಸ್ಪಷ್ಟವಾಗಿ ಗೊತ್ತಾಗಬೇಕು. ನನಗೆ ನೀಡಿರುವ ಉತ್ತರದಲ್ಲಿ ಬಹುಮಹಡಿ ಕಟ್ಟಡಗಳನ್ನು ಕಟ್ಟುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ ಎಂದು ಹೇಳಿದ್ದಾರೆ. ಇಲ್ಲಿ ಹೈ ಹೈಟ್ ಬಿಲ್ಡಿಂಗನ್ನು 18 ಫ್ಲೋರ್‌ಗಳಲ್ಲಿ

ಕಟ್ಟುತ್ತಿದ್ದಾರೆ. ಹಿಂದೆ ಇದೇ ರೀತಿ ಸ್ಯಾಂಕಿ ಟ್ಯಾಂಕ್ ಹತ್ತಿರ 18 ಫ್ಲೋರ್‌ಗಳ ಬಿಲ್ಡಿಂಗ್ ಬರುತ್ತಿತ್ತು. ಅವತ್ತೂ ಸಹ ನಾಗರಿಕರ ಧ್ವನಿಯನ್ನೆತ್ತಿದರು. ನಾನು ಕೇಳುವುದೇನೆಂದರೆ 18 ಫ್ಲೋರ್‌ಗಳ ಈ ಬಿಲ್ಡಿಂಗ್ ಅವಶ್ಯಕವಿತ್ತೇ? ಈ ಕಟ್ಟಡದಿಂದ ಇಲ್ಲಿ ಪರಿಸರದ ಮೇಲೆ, ಸುತ್ತಮುತ್ತ ಏನೂ ಪರಿಣಾಮವಾಗುವುದಿಲ್ಲ ಎನ್ನುವ ಉತ್ತರವನ್ನು ಕೊಟ್ಟಿದ್ದಾರೆ. ನಾನು ಕೇಳುವುದೇನೆಂದರೆ, ಜನ ಜಾಸ್ತಿ ಆಗಿದ್ದಾರೆ ವಾಹನಗಳು ಜಾಸ್ತಿ ಆಗಿವೆ. ರಸ್ತೆ ಸಾಕಾಗುತ್ತಿಲ್ಲವೆಂದು ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಸಾಮಾನ್ಯ ಜನರ ಜಮೀನನ್ನು ವಶ ಪಡಿಸಿಕೊಂಡು ರಸ್ತೆ ವಿಸ್ತೀರ್ಣ ಮಾಡಲಿಕ್ಕೆ ಹೊರಟ್ಟಿದ್ದಾರೆ. ಜನ ಲಬೋ ಲಬೋ ಎಂದು ಹೇಳುತ್ತಿದ್ದಾರೆ. ಇರತಕ್ಕಂಥ ಒಂದೇ ಒಂದು ಸೈಟನ್ನು ವಶಪಡಿಸಿ ಕೊಂಡರೆ ಹೇಗೆ? ಎಂದು ಜನ ಆತಂಕ ವ್ಯಕ್ತಪಡಿಸಿ ಗೋಳಿಡುತ್ತಿದ್ದಾರೆ. ಈ ಸಂದರ್ಭದಲ್ಲಿ ಇಷ್ಟು ಸಾವಿರಾರು ಬಿಲ್ಡಿಂಗ್‌ಗಳ ಅವಶ್ಯಕತೆ ಇದೆಯೇ? ಜೊತೆಗೆ 52 ಎಕರೆಯಲ್ಲಿ ಎಷ್ಟು ಎಕರೆ ಜಾಗವನ್ನು ಇವರು civic community ಗೆ ಮತ್ತು Country Town Planing Act ಪ್ರಕಾರ ಬಿಡಬೇಕಾಗಿತ್ತು? ಸನ್ಮಾನ್ಯ ಬಿಡಿಎಗೆ ಸಂಬಂಧಪಟ್ಟಂಥವರು ಮತ್ತು ಸಂಬಂಧಪಟ್ಟಂಥ ಸರ್ಕಾರದವರು ಇದಕ್ಕೆ ಗಮನಹರಿಸಿ ಉತ್ತರ ಕೊಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ಗೌರವಾನ್ವಿತ ಮಾನ್ಯ ಸದಸ್ಯರು ಕೇಳಿರುವ ಎಲ್ಲಾ ಪ್ರಶ್ನೆಗಳು ಸಹಿತ ಸತ್ಯ ಇರಬಹುದು. ನನ್ನ ಹತ್ತಿರ ಅದರ ಮಾಹಿತಿ ಇಲ್ಲ. ಏಕೆಂದರೆ ಇವು ನನ್ನ ಇಲಾಖೆಗೆ ಸಂಬಂಧಪಟ್ಟ ವಿಚಾರಗಳಲ್ಲ. ಬೆಂಗಳೂರು ಮಹಾನಗರ ಪಾಲಿಕೆಯವರು ಇವರಿಗೆ permission ಅನ್ನು ಕೊಡತಕ್ಕಂಥ ಸಂದರ್ಭದಲ್ಲಿ ಇದನ್ನೆಲ್ಲ ಗಮನಿಸಬೇಕಾಗಿತ್ತು. ನನಗೆ ಬಂದಿರುವ ಮಾಹಿತಿಗಳ ಪ್ರಕಾರವಾಗಿ ಇದನ್ನೆಲ್ಲ ಗಮನಿಸಿಯೇ ಅವರು ಈ ಕಟ್ಟಡವನ್ನು ಕಟ್ಟಲಿಕ್ಕೆ permission ಅನ್ನು B.M.P. ಯಿಂದ ಕೊಟ್ಟಿದ್ದಾರೆಂದು ನಾನು ತಿಳಿಯಲ್ಪಟ್ಟಿದ್ದೇನೆ. ಬಹುಶಃ 35–40 ವರ್ಷಗಳ ಹಿಂದೆ Kirloskar company ಪ್ರಾರಂಭ ಮಾಡಿದಾಗ ಇವರಿಗೆ ಕೊಟ್ಟಿರತಕ್ಕಂಥ ಜಮೀನು ಯಾವ condition ಗಳಲ್ಲಿ ಕೊಟ್ಟಿದ್ದರು ಎನ್ನುವ ಮಾಹಿತಿ ನನ್ನಲ್ಲಿ ಇಲ್ಲ. ಅದನ್ನು ತಿಳಿ ದುಕೊಂಡು ಅವರಿಗೆ ತಿಳಿಸುತ್ತೇನೆ. ಹಾಗೆಯೇ, ಎರಡು ಮೂರು ವರ್ಷಗಳ ಹಿಂದೆಯೇ ಸರ್ಕಾರ ಅವರಿಗೆ ಮಾರಾಟ ಮಾಡಲಿಕ್ಕೆ ಕೂಡ ಪರವಾನಿಗೆಯನ್ನು ಕೊಟ್ಟಿದ್ದಾರೆ. ನಾನು Industries Minister ಆದ ಮೇಲೆ ಅಲ್ಲ. ಸರ್ಕಾರದ ಪರವಾನಿಗೆ ತೆಗೆದುಕೊಂಡೇ Kirloskarನವರು ಬೇರೆಯವರಿಗೆ ಮಾರಾಟ ಮಾಡಿರತಕ್ಕಂಥದ್ದು

ಸಹಿತ ಕಡತಗಳ ಪ್ರಕಾರ ನನ್ನ ಕೈಗೆ ಸಿಗುತ್ತದೆ. ಇಷ್ಟು ಮಾಹಿತಿಯನ್ನು ನಾನು ಅವರಿಗೆ ತಮ್ಮ ಮೂಲಕ ಕೊಡಬಲ್ಲೆ.

ಶ್ರೀ ನೆ.ಲ. ನರೇಂದ್ರಬಾಬು : ಮಾನ್ಯ ಅಧ್ಯಕ್ಷರೆ, ನಾನು ಬಹಳ ಸ್ಪಷ್ಟವಾಗಿ ಕೇಳುತ್ತಿದ್ದೇನೆ. 52 ಎಕರೆಯಲ್ಲಿ multistoried building 18 floorನದು ಕಟ್ಟುತ್ತಿರುವುದನ್ನು ಗಮನಕ್ಕೆ ನಂಬಲರ್ಹ ಮೂಲಗಳಿಂದ ಬಂದಿದೆ. ಇನ್ನು ಅಲ್ಲಿ Plqn sanction ಆದರೂ ಈಗಾಗಲೇ ಅದನ್ನು ಮಾರಲಿಕ್ಕೆ ಒಂದು counter ಗಳಲ್ಲಿ website ಗಳಲ್ಲಿ ಅದನ್ನು launch ಮಾಡಿದ್ದಾರೆ. 52 ಎಕರೆಗೆ 60 ಪರ್ಸೆಂಟ್‌ನಂತೆ ಎಷ್ಟು ಎಕರೆ ಜಮೀನು ಬಿಡಬೇಕು? ಏಕೆ ಬಿಟ್ಟಿಲ್ಲ? ಇದು ಸರ್ಕಾರದ ಗಮನಕ್ಕೆ ಏಕೆ ಬಂದಿಲ್ಲ? change of land ಇವರಿಗೆ ಕೊಟ್ಟು Plan ಕೊಡುವುದಕ್ಕಿಂತ ಮುಂಚೆ ಏಕೆ ಗಮನಿಸಲಿಲ್ಲ? ಅಲ್ಲಿ ಕಾರ್ಖಾನೆಗಳ ಜೊತೆಗೆ ಗೃಹಸಮುಚ್ಚಯಗಳು ಇವೆ. ಮೊನ್ನೆ ತಾನೆ fire accident ಆಗಿ ಪಕ್ಕದಲ್ಲಿರತಕ್ಕಂಥವರಿಗೆ ತೊಂದರೆಯಾಯಿತು. ಇದು ಒಬ್ಬರಿಗೆ ಒಂದು ನ್ಯಾಯ ಇನ್ನೊಬ್ಬರಿಗೆ ಇನ್ನೊಂದು ನ್ಯಾಯ ಏಕೆ? ಬಡವರು ಯಾರೋ ಒಂದು ಎಕರೆ ಜಾಗವನ್ನು siteಗಳಾಗಿ ವಿಂಗಡಿಸಬೇಕಾದರೆ 60 ಪರ್ಸೆಂಟ್ ಜಾಗವನ್ನು ಬಿಡಬೇಕೆಂದು B.D.A. ಹೇಳುತ್ತದೆ. ಆದರೆ ಯಾವುದೋ ದೊಡ್ಡ ಕಂಪನಿಗಳು 52 ಎಕರೆ ಜಾಗದಲ್ಲಿ ಸೈಟುಗಳನ್ನು ಮಾಡಲಿಕ್ಕೆ ಹೋದಾಗ 60 ಪರ್ಸೆಂಟ್ ಜಾಗವನ್ನು ಬಿಡುವ ಕುರಿತು ಕಡೆಗಣಿಸುತ್ತದೆ. ಪಕ್ಕದಲ್ಲಿಯೇ railway line ಹಾದು ಹೋಗುತ್ತದೆ. ಅಲ್ಲಿ ಇರತಕ್ಕಂಥದ್ದು, 40 ಅಡಿ ರಸ್ತೆ. ನಾಳೆಯ ದಿವಸ ಅಲ್ಲಿ ಪರಿಸರದ ಮೇಲೆ ಪರಿಣಾಮ ಬೀರುತ್ತದೆ. Sanitary, water, transport ಹೀಗೆ ಎಲ್ಲದಕ್ಕೂ affect ಆಗುತ್ತದೆ. ಬೆಂಗಳೂರು ನಗರದಲ್ಲಿ ಕಾರ್ಖಾನೆಗಳಿಗೆ ಇದೊಂದು ತರಹ ದಂಧೆಯಾಗಿದೆ.ಎಲ್ಲ ಕಾರ್ಖಾನೆಗಳನ್ನು ಮುಚ್ಚಿ ಇವತ್ತು ಒಳ್ಳೆಯ land value ಇದೆಯೆಂದು ಮಾರುವುದಕ್ಕೆ ಹೊರಟಿದ್ದಾರೆ. ನಮ್ಮ constituency ನಲ್ಲಿ G.K.W. next sale ಗೆ ಇದೆ. ನಾನು ವಿನಂತಿ ಮಾಡುವುದೇನೆಂದರೆ, 60 ಪರ್ಸೆಂಟ್ ಜಾಗವನ್ನು ಏಕೆ ಬಿಡಿಸಿಲ್ಲ?

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ಗೌರವಾನ್ವಿತ ಮಾನ್ಯ ಸದಸ್ಯರು ಕೇಳತಕ್ಕಂಥ ಎಲ್ಲ ಪ್ರಶ್ನೆಗಳು ಸರಿಯಾಗಿವೆ. ಆದರೆ ಪ್ರಶ್ನೋತ್ತರ ವೇಳೆಯಲ್ಲಿ ಉತ್ತರ ಕೊಡುವುದಕ್ಕೆನ್ನ ಹತ್ತಿರ ಮಾಹಿತಿ ಇಲ್ಲ. ಏಕೆಂದರೆ ಇದು ನನಗೆ ಸಂಬಂಧಪಟ್ಟಂಥ ವಿಚಾರಗಳಲ್ಲ. Permission ಕೊಟ್ಟಿರತಕ್ಕಂಥವರು ಮಹಾನಗರ ಪಾಲಿಕೆಯವರು. ಮಹಾನಗರ ಪಾಲಿಕೆಯವರು ಇದನ್ನೆಲ್ಲ ಗಮನಿಸಬೇಕಾಗಿರತಕ್ಕಂಥವರು. ಬಾಕಿ ಯಾವ್ಯಾವ ವಿಷಯಗಳಿವೆ, ಕೈಗಾರಿಕೆಗೆ ಸಂಬಂಧಪಟ್ಟ ಹಾಗೆ ಏನಾದರು ಇದ್ದರೆ ಪ್ರಶ್ನೋತ್ತರ ವೇಳೆಯಲ್ಲಿ ನಾನು ಉತ್ತರ ಕೊಡಬಲ್ಲೆ

ಬಾಕಿ ವಿಚಾರದಲ್ಲಿ ಪ್ರಶ್ನೋತ್ತರ ವೇಳೆ ಅಲ್ಲದಿದ್ದರೆ ಬೇರೆ ರೂಪದಲ್ಲಿ ಅವರು ಪ್ರಶ್ನೆ ಮಾಡಲಿ. ಶ್ರೀ ನರೇಂದ್ರಬಾಬುರವರು ಅವರ ಕ್ಷೇತ್ರದಲ್ಲಿರತಕ್ಕಂಥ ಒಂದು ಕೈಗಾರಿಕೆಗೆ ಕೊಟ್ಟಿರತಕ್ಕಂಥ ಜಾಗದಲ್ಲಿ ಬಹುಮಹಡಿ ಕಟ್ಟಡಗಳು ಬಂದಿರತಕ್ಕಂಥದ್ದು, ಮುಂದೆ Fire accident ಆದರೆ ಅಥವಾ ಮತ್ತೇನಾದರೂ ತೊಂದರೆಯಾದರೆ ಎನ್ನುವ ಕಾಳಜಿ ಇರತಕ್ಕಂಥದ್ದು ಸ್ವಾಭಾವಿಕ. ಈ ಪ್ರಶ್ನೆಯನ್ನು ಬೇರೆ ರೂಪದಲ್ಲಿ ತಂದರೆ, ಈ ಬಿಡಿಎ ಮತ್ತು ಕಾರ್ಪೊರೇಷನ್ ಖಾತೆಗಳು ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಇರುವುದರಿಂದಾಗಿ ಅವರಿಗೆ ಈ ಪ್ರಶ್ನೆಯನ್ನು ಬೇರೆ ರೀತಿಯಲ್ಲಿ ಕೇಳಿದರೆ ಯಾವಾಗ ಇದನ್ನು ಪರಭಾರೆ ಮಾಡಿದರು? ಇತ್ಯಾದಿ ಸ್ಪಷ್ಟವಾದ ಅಂಕಿಅಂಶಗಳು ಸಿಗುತ್ತವೆ. ಇದನ್ನು ಪರಭಾರೆ ಮಾಡಿ 2–3ವರ್ಷಗಳಾಗಿವೆ. ಮತ್ತೆ Kirloskarನವರು ಅವರು share ಅನ್ನು ಸಹಿತ ಮಾರಿಬಿಟ್ಟಿದ್ದಾರೆ. ಅದಕ್ಕೂ ಸಹಿತ Government ನವರು Permission ಕೊಟ್ಟಿದ್ದಾರೆ. ಅವೆಲ್ಲ ಮಾಹಿತಿ ಅವರಿಗೆ ಸಿಗುತ್ತದೆ.

ಅಧ್ಯಕ್ಷರು : ಪ್ರಶ್ನೋತ್ತರ ವೇಳೆ ಮುಗಿಯಿತು.

ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಹೆಚ್.ಕೆ.ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳ 21ನೇ ಪಟ್ಟಿಯಲ್ಲಿರುವ 65 ಪ್ರಶ್ನೆಗಳ ಪೈಕಿ 52 ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡುವ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ಮಂಡಿಸಲಾಯಿತು.

ನಿಯಮ 69ರ ಮೇರೆಗೆ ಚರ್ಚೆ

ವಿಷಯ:

ಅಧ್ಯಕ್ಷರು : ನಿಯಮ 69ರ ಅಡಿಯಲ್ಲಿ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೇನೆ. ಇದೇ ವಿಷಯ ಹಿಂದೆ ಬೇರೆ ಬೇರೆ ನಿಯಮಗಳಡಿಯಲ್ಲಿ ಮಾತ ನಾಡಿದ್ದರಿಂದ ಇದನ್ನು ಬೇಗ ಚರ್ಚೆ ಮಾಡಿ ಮುಗಿಸೋಣ.

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಅಧ್ಯಕ್ಷರೆ, ಕೃಷ್ಣಾ ಕಣಿವೆ ಯೋಜನೆ ಕುರಿತು ಆಂಧ್ರಪ್ರದೇಶದವರು ಅನಧಿಕೃತವಾದಂಥ ಯೋಜನೆಗಳನ್ನು ಕೈಗೊಳ್ಳುತ್ತಿದ್ದಾರೆ ಎನ್ನುವ ಮಾಹಿತಿ ನಮಗೆ ಬಂದಿದೆ.